ಪದ್ಮಾ ಮಾಡುವ ಬೆಂಡೆಕಾಯಿ ಪಲ್ಯೆ, ಚವಳಿಕಾಯಿ ಪಲ್ಯೆ, ಬೆರಳು ಕಚ್ಚಿಕೊಳ್ಳುವಂತೆ ಮಾಡುವ ಹುಳ್ಳಿಕಟ್ಟಿನ ಸಾರು ರಮೇಶಪ್ಪ, ಜಯಮ್ಮನಿಗೆ ಇಷ್ಟವಾಗಿದ್ದವು. ತಾವು ಕೂಲಿಗೆ ಹೋದ ಹೊಲದಲ್ಲಿ ಕಿತ್ತುಕೊಂಡು ಬರುತ್ತಿದ್ದ ಕಿರಕಸಾಲಿ ತಪ್ಪಲು ಪಲ್ಯೆಗಂತೂ ಮಾರು ಹೋಗಲೇಬೇಕು. ಹಂಚಿನಲ್ಲಿ ಒಂದಿಷ್ಟು ಎಣ್ಣೆ ಹಾಕಿ, ಅದರಲ್ಲಿ ಬೆಳ್ಳೊಳ್ಳಿ, ಕಿರಕಸಾಲಿ ತಪ್ಪಲು, ಉಪ್ಪು, ಖಾರದ ಪುಡಿ ಹಾಕಿ ತಾಳಿಸಿ ಕೊಟ್ಟರೆ ರಮೇಶಪ್ಪ ಎಂಟತ್ತು ಬಿಸಿ ರೊಟ್ಟಿ ಚಪ್ಪರಿಸುತ್ತಿದ್ದ. ಇದ್ದುದರಲ್ಲಿಯೇ ಅವಳಿಗೆ ಹದವಾಗಿ ಅಡುಗೆ ಮಾಡುವ ಕಲೆ ಕರಗತವಾದಂತಿತ್ತು.

ಪದ್ಮಾ ನಿಜಕ್ಕೂ ಲಾವಣ್ಯವತಿ. ಅವಳು ಲಂಗದಾವಣಿ ಧರಿಸಿ ನೀರು ತರಲು ಅಣತಿ ದೂರದಲ್ಲಿದ್ದ ಸರಕಾರಿ ನಳಕ್ಕೆ ತೆರಳಿದರೆ ಸುಖಾಸುಮ್ಮನೆ ಹುಡುಗರು ಆ ದಾರಿಯಲ್ಲಿ ಕೆಲಸವಿದ್ದವರಂತೆ ನಟಿಸುತ್ತಾ ಅವಳ ಚೆಲುವನ್ನು ಕಣ್ಣನ ತುಂಬಿಕೊಳ್ಳುತ್ತಿದ್ದರು. ಅವಳ ತುಟಿಯಿಂದ ನಗೆ ತುಳುಕಿದರಂತೂ ಹುಡುಗರು ಅದ ಕಂಡು ಬಹುಮಾನ ಗೆದ್ದವರಂತೆ ಆನಂದತುಂದಿಲರಾಗುತ್ತಿದ್ದರು. ಸಿನಿಮಾ ನಟಿಯಂತೆ ರಂಗು ರಂಗಾಗಿದ್ದ ಅವಳು ಹುಡುಗರಿಗೆ ಬೀಳುವ ರಾತ್ರಿಯ ಕನಸಿಗೆ ಕಾಯಂ ರಾಣಿಯಾಗಿದ್ದಳು. ಪದ್ಮಾಳಿಗೆ ತನ್ನ ಚೆಲುವಿನ ಅರಿವಿದ್ದರೂ ಮನೆಯಲ್ಲಿ ಹಾಸಿ ಹೊದ್ದು ಮಲಗಿದ್ದ ಬಡತನ, ತನ್ನ ಮ್ಯಾಲೆ ಅಗಾಧ ಪ್ರೀತಿ ತೋರುವ ಅಪ್ಪಅವ್ವನ ಮುಖ ಕಣ್ಮುಂದೆ ಸುಳಿದು ಹುಡುಗರಿಗೆ ಸೊಪ್ಪು ಹಾಕದೆ ತಣ್ಣಗಿದ್ದಳು. ದಿನಗಳು ಉರುಳಿ ಕಾಲನೊಳಗೆ ಒಂದಾಗುತ್ತಾ ಹೋದಂತೆ ಅವಳ ಅಪ್ಪಅವ್ವ ಮದುವೆ ಮಾಡಲು ಆ ಕಡೆ ಈ ಕಡೆ ವರ ನೋಡತೊಡಗಿದರು.

ಪದ್ಮಾ ರೂಪವತಿಯಾದ್ದರಿಂದ ವರ ಸಿಗುವುದೇನೂ ತಡವಾಗಲಿಲ್ಲ. ಪಕ್ಕದ ಹಳ್ಳಿಯಲ್ಲಿ ಇದ್ದುದರಲ್ಲೇ ತಮಗಿಂತ ಸ್ಥಿತಿವಂತರಾದ ಕಾತರಕಿ ದೇವರಾಜನೊಂದಿಗೆ ಪದ್ಮಾಳ ಮದುವೆ ಗಟ್ಟಿಯಾಯಿತು. ದೇವರಾಜನೂ ಒಬ್ಬನೇ ಮಗ. ಅಪ್ಪ ಗೋವಿಂದ, ಅವ್ವ ತಾಯವ್ವ ಇವರಿಷ್ಟೇ ಮನೆಯಲ್ಲಿರುವುದು. ಹಾಗಾಗಿಯೇ ರಮೇಶಪ್ಪ, ಜಯಮ್ಮ ತಮ್ಮ ಮಗಳು ಸುಖವಾಗಿರುತ್ತಾಳೆಂದು ದೇವರಾಜನಿಗೆ ಕೊಡಲು ಒಪ್ಪಿದರು. ಕಾರ್ತೀಕ ಮಾಸದಲ್ಲಿ ಮದುವೆಯೂ ಆಯಿತು. ಪದ್ಮಾ ದೇವರಾಜನ ಮನೆ ಸೇರಿದಳು. ರಮೇಶಪ್ಪ, ಜಯಮ್ಮ ನೆಮ್ಮದಿಯ ನಿಟ್ಟುಸಿರು ಬಿಟ್ಟರು.

ಪದ್ಮಾಳ ಹಾಜರಿ ದೇವರಾಜನ ಮನೆಯಲ್ಲಿ ಹೊಸದಾಗಿ ಬೆಳಕು ಕುಡಿಚಾಚಿದಂತಾಯಿತು. ದೇವರಾಜನಂತೂ ಅವಳನ್ನು ಕ್ಷಣ ಹೊತ್ತೂ ಬಿಟ್ಟಿರದೇ ಪ್ರೀತಿಯ ಮಳೆಗರೆಯುತ್ತಿದ್ದ. ಹೊತ್ತು ಗೊತ್ತಿಲ್ಲದೆ ತುಟಿ ಮುತ್ತು ಬದಲಿಸುತ್ತಿದ್ದ. ಇಬ್ಬರೂ ಸೇರಿ ಸ್ವರ್ಗಕ್ಕೆ ಕಿಚ್ಚು ಹಚ್ಚುತ್ತಿದ್ದರು. ಪದ್ಮಾಳ ಅಡುಗೆಯ ರುಚಿ, ಅವಳು ಮನೆಯಲ್ಲಿ ಒಂದು ಕಸದ ತುಂಡೂ ಬೀಳದೆ ನೀಟಾಗಿಸುವ ಪರಿ, ಬಟ್ಟೆಯ ಮೇಲೆ ಸಣ್ಣ ಕಲೆಯ ಗುರುತೂ ಉಳಿಯದಂತೆ ಅವಳು ಬಟ್ಟೆ ತೊಳೆಯುತ್ತಿದ್ದ ರೀತಿ, ನಿತ್ಯ ಬೆಳಗ್ಗೆ ಬಗೆ ಬಗೆಯಲ್ಲಿ ಹಾಕುತ್ತಿದ್ದ ರಂಗೋಲಿ ಎಲ್ಲವೆಲ್ಲವನ್ನೂ ಅವಳ ಅತ್ತೆ, ಮಾವ ಓಣಿ ಮಂದಿಗೆಲ್ಲಾ ಹೇಳಿ ತಮ್ಮ ಸೊಸೆಯನ್ನು ಕೊಂಡಾಡಿದ್ದೇ ಕೊಂಡಾಡಿದ್ದು. ಬದುಕು ಹೀಗೆ ಇಳಕಲು ಇದ್ದ ಕಡೆ ನೀರು ಸರಾಗ ಹರಿದಂತೆ ಚೆಂದಗೆ ಸಾಗಿತ್ತು. ಹೀಗಿರುವಾಗಲೇ ಪದ್ಮಾಳಿಗೆ ದುರ್ವಾರ್ತೆಯೊಂದು ಬರಸಿಡಿಲಂತೆ ಬಂದೆರಗಿತು. ಅವಳ ಅಪ್ಪಅವ್ವ ಹುಚ್ಚಾಳಂಬೆ ಸಾರು ತಿಂದು ಸಾವಿನ ಮನೆ ಸೇರಿದ್ದರು. ಕೂಲಿಗೆ ಹೋದಾಗ ಅದೇ ಮೊದಲ ಮಳೆಗೆ ಯಾರದೋ ಬದುವಿನಲ್ಲಿ ಪುದುಪುದು ಎದ್ದಿದ್ದ ಆಳಿಂಬೆ ನೋಡಿ,